ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 4, January-February , 2024, Pp. 37-45.
©*IIMRD*, Mysuru

IIMRD JOURNALS
www.iimrd.com

# ಸಮಸಮಾಜ ನಿರ್ಮಿಸುವಲ್ಲಿ ಬಸವಣ್ಣನವರ ಬಹುದೃಷ್ಟಿಯ ತಾತ್ವಿಕ ಚಿಂತನೆಗಳು

**ಡಾ.ಸಿ.ಟಿ.ಜಯಣ್ಣ**
ಸಹ ಪ್ರಾಧ್ಯಾಪಕರು, ಎಸ್‌ಜೆಎಂ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಎಸ್‌ಜೆಎಂ ಡೆಂಟಲ್ ಕಾಲೇಜ್ ಕ್ಯಾಂಪಸ್, ಬಿ ಡಿ ರಸ್ತೆ, ಚಿತ್ರದುರ್ಗ.

**ಸಾರಾಂಶ: (Abstract)**

*ಇದು ಪ್ರಜಾಪ್ರಭುತ್ವ ಯುಗ. ಎಲ್ಲರಿಗೂ ಎಲ್ಲ ರೀತಿಯ ಸುಖ–ಸೌಕರ್ಯಗಳು ಸಮಾನವಾದ ರೀತಿಯಲ್ಲಿ ದೊರೆಯಬೇಕು. ಸಮಾನತೆಯೇ ಪ್ರಜಾಪ್ರಭುತ್ವದ ಬೆನ್ನೆಲುಬು. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ – ಮುಂತಾದ ಕ್ಷೇತ್ರಗಳಲ್ಲಿ ಸರ್ವರಿಗೂ ಸಮಾನ ಅವಕಾಶ ದೊರಕಬೇಕು; ಆ ಮೂಲಕವಾಗಿ ಸರ್ವೋದಯವಾಗಬೇಕು. ಗಣರಾಜ್ಯ ಬಂದು ಆರು ದಶಕಗಳಾದರೂ ಸಮಾನತೆ, ಸರ್ವೋದಯ ತತ್ವಗಳು ಕಾಗದದ ಮೇಲೆ ಉಳಿದಿವೆ; ಅನುಷ್ಠಾನಕ್ಕೆ ಬಂದಿರದೆ ಸಾಮಾಜಿಕ ಅಸಮಾನತೆ, ಬಡತನ, ಅನಕ್ಷರತೆಗಳಿಂದ ಜನರು ಮುಕ್ತವಾಗಿಲ್ಲ. ಜಾತಿ ವ್ಯವಸ್ಥೆಯು ಮಾನವ ಜನಾಂಗವನ್ನು ಕತ್ತು ಹಿಸುಕುವ ರಕ್ಕಸವಾಗಿದೆ. ದೇಶದಲ್ಲಿ 'ವರ್ಗ'ವಿಲ್ಲ; ಜಾತಿ ಇದೆ. ಜಾತಿಯೇ ವರ್ಗವಾಗಿ ಪರಿವರ್ತನೆಗೊಂಡಿದೆ. ಮೇಲ್ಜಾತಿ ಮೇಲ್ವರ್ಗವಾಗಿದ್ದರೆ, ಕೆಳಜಾತಿ ಕೆಳವರ್ಗವಾಗಿದೆ. ಜಾತಿ ಆಧಾರಿತ ಅಂದರೆ ಶ್ರೇಣೀಕೃತ ಸಮಾಜದಲ್ಲಿ ಪ್ರತಿಯೊಂದು ಜಾತಿಯು ಕೆಳಜಾತಿಯನ್ನು ತುಳಿಯಲು, ಶೋಷಣೆ ಮಾಡಲು ಸದಾ ಪ್ರಯತ್ನ ಮಾಡುತ್ತಲೇ ಇರುತ್ತದೆ. ಮೇಲ್ಜಾತಿಗೆ ಸಿಗುತ್ತಿರುವ ಅವಕಾಶಗಳು ನಿಮ್ನ ಜಾತಿಗೆ ಸಿಗುತ್ತಿಲ್ಲ. ಕೆಳಜಾತಿಯವರು ಆರ್ಥಿಕವಾಗಿ ಕಡುಬಡವರಾಗುತ್ತ ಹೊರಟ್ಟಿದ್ದರೆ, ಮೇಲ್ವರ್ಗದವರು ಆರ್ಥಿಕವಾಗಿ ಬಲಿಷ್ಠರಾಗುತ್ತಿದ್ದಾರೆ. ಜಾತಿಯ ಶ್ರೇಷ್ಠತೆ ಮತ್ತು ಪರಂಪರಾಗತವಾಗಿ ಬಂದ ಸಂಪತ್ತು ಮೇಲ್ಜಾತಿಯವರಿಗೆ ಲಭ್ಯವಾಗುವುದರಿಂದ ಅವರು ಅಕ್ಷರ ಕಲಿತು, ಅಧಿಕಾರಗಳನ್ನು ಹಿಡಿಯುತ್ತಾರೆ. ಇದ್ಯಾವುದೂ ದೊರಕದ ಕೆಳವರ್ಗದವರು ಅವಿದ್ಯಾವಂತರಾಗಿದ್ದಾರೆ; ಕಡುಬಡವರಾಗಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಇಂದಿನ ಆಧುನಿಕ ಕಾಲದಲ್ಲಿ ಸಮಾನತೆ, ಸರ್ವೋದಯಗಳು ಕೇವಲ ಕನಸಿನ ಮಾತಾಗಿ ಉಳಿದಿವೆ. ಪ್ರಸ್ತುತ ಲೇಖನದಲ್ಲಿ ಸಮಸಮಾಜ ನಿರ್ಮಿಸುವಲ್ಲಿ ಬಸವಣ್ಣನವರ ಬಹುದೃಷ್ಟಿಯ ತಾತ್ವಿಕ ಚಿಂತನೆಗಳನ್ನು ಅವಲೋಕಿಸಲಾಗಿದೆ.*

**ಮುಖ್ಯಪದಗಳು (Keywords):** ಸಮಾನತೆ, ಸಾಮಾಜಿಕ ಚಿಂತನೆ, ಸಮಸಮಾಜ, ವಿಶ್ವಗುರು ಬಸವಣ್ಣ, ತಾತ್ವಿಕ ಚಿಂತನೆಗಳು.

**ಪೀಠಿಕೆ**

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಮಾಜೋಧಾರ್ಮಿಕ ಚಳವಳಿ ತುಂಬ ಮಹತ್ವದ್ದಾಗಿರುತ್ತದೆ. ಸಮಾಜೋಧಾರ್ಮಿಕ ಚಳವಳಿಯ ಮೂಲಕವಾಗಿ ಎಲ್ಲ ಕ್ಷೇತ್ರಗಳಲ್ಲೂ ಸಮಾನತೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದವರು ವಚನಕಾರರು.

*Please cite this article as:* *ಜಯಣ್ಣ ಸಿ.ಟಿ.* (2024). ಸಮಸಮಾಜ ನಿರ್ಮಿಸುವಲ್ಲಿ ಬಸವಣ್ಣನವರ ಬಹುದೃಷ್ಟಿಯ ತಾತ್ವಿಕ ಚಿಂತನೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ.* 37–45

ಬಸವಣ್ಣನವರು ಸಮಾಜೋಧಾರ್ಮಿಕ ಚಳವಳಿಯನ್ನು ಹುಟ್ಟು ಹಾಕುವುದಕ್ಕಿಂತ ಮುಂಚೆ ನಾಡಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮುಂತಾದ ಎಲ್ಲ ಕ್ಷೇತ್ರಗಳಲ್ಲಿ ಅಸಮಾನತೆ ತುಂಬಿ ಹೋಗಿತ್ತು. ಕೆಳವರ್ಗದವರು ದೇವಸ್ಥಾನ ಪ್ರವೇಶ ಮಾಡುವಂತಿರಲಿಲ್ಲ; ಅಕ್ಷರ ಕಲಿಯುವಂತಿರಲಿಲ್ಲ; ಅಧಿಕಾರ ಹೊಂದುವಂತಿರಲಿಲ್ಲ ಮತ್ತು ಅವರಿಗೆ ಹಣ ಸಂಪಾದನೆ ಮಾಡಲು ಅವಕಾಶವಿರಲಿಲ್ಲ. ಸಮಾಜದ ಸರ್ವ ರೀತಿಯ ಸವಲತ್ತುಗಳು ಕೇವಲ ಕೆಲವರಿಗೆ ಮಾತ್ರ ಮೀಸಲಾಗಿದ್ದು, ಕೆಳವರ್ಗದವರು ತುಂಬಾ ಹೀನಾಯ ಸ್ಥಿತಿಯಲ್ಲಿದ್ದರು. ಪುರೋಹಿತಶಾಹಿಯ ಮಡಿ–ಮೈಲಿಗೆಯಿಂದಾಗಿ, ಅರ್ಥಹೀನ ಕಂದಾಚಾರಗಳಿಂದಾಗಿ, ಜನವಿರೋಧಿ ವಾಮಾಚಾರಗಳಿಂದಾಗಿ ಧಾರ್ಮಿಕ ಬದುಕು ತುಂಬ ದುಃಸ್ಥಿತಿಯಲ್ಲಿತ್ತು. ಅಜ್ಞಾನ, ಮೂಢನಂಬಿಕೆ ಮತ್ತು ಅನಿಷ್ಟ ಆಚರಣೆಗಳಿಂದಾಗಿ ಜನಸಾಮಾನ್ಯರ ಬದುಕು ನೆಲಕಚ್ಚಿ ಹೋಗಿತ್ತು.

ಶೈವಬ್ರಾಹ್ಮಣ ಮತದಿಂದ ಬಂದ ಬಸವಣ್ಣ ತಾನು ಶ್ರೇಷ್ಠಕುಲದವನೆಂಬ ಭ್ರಮೆಯಿಂದ ಹೊರಬಂದು ಕೆಳವರ್ಗದವರ ದುಃಖ ದುಮ್ಮಾನಗಳೊಂದಿಗೆ ತನ್ನನ್ನು ಗುರುತಿಸಿಕೊಂಡ. ಬಸವಣ್ಣ ಜಾತಿ ವ್ಯವಸ್ಥೆಯನ್ನು ನಿರಾಕರಿಸುವುದರ ಮೂಲಕ ಸಮಾನತೆಯನ್ನು ಎತ್ತಿಹಿಡಿದ. ಬಸವಣ್ಣ ತಾನು ಲಿಂಗತಾರತಮ್ಯ ಮತ್ತು ಅಸಮಾನತೆ ತೊಡೆಯುತ್ತ ಪರಿವರ್ತನೆಗೆ ನಾಂದಿ ಹಾಡಿದ. ಪುರೋಹಿತಶಾಹಿ ಜನವಿರೋಧಿ ನಿಲುವುಗಳಿಂದ, ಗೊಡ್ಡು ಸಂಪ್ರದಾಯಗಳಿಂದ ರೋಸಿಹೋಗಿದ್ದ ಬಸವಣ್ಣ ಆ ಮತವನ್ನು ತಿರಸ್ಕರಿಸಿ ಶೈವ ಮತಾನುಯಾಯಿ ಆಗಿ ಮುಂದಿನ ದಿನಗಳಲ್ಲಿ ಹೊಸ ಧರ್ಮದ ಸ್ಥಾಪಕನಾದ. ಬಸವಪ್ರಣೀತ ಧರ್ಮದಲ್ಲಿ ಜಾತಿಭೇದ, ಲಿಂಗಭೇದ, ವರ್ಣಭೇದಗಳಿಲ್ಲದೆ ಎಲ್ಲ ವರ್ಗದ ಸ್ತ್ರೀ–ಪುರುಷರು ಸೇರಲು ಅವಕಾಶ ಕಲ್ಪಿಸಿಕೊಟ್ಟ. ಶರಣಧರ್ಮದ ಮೂಲಕ ಸರ್ವೋದಯ, ಸಮಾನತೆಗಳನ್ನು ಅನುಷ್ಠಾನಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದ; ಆ ಮೂಲಕವಾಗಿ ಈ ಧರ್ಮವನ್ನು ವಿಶ್ವಮಾನ್ಯಗೊಳಿಸಲು ಹೆಣಗಿದ. ಬಸವಣ್ಣನವರ ಮತ್ತು ಸಮಕಾಲೀನ ಶಿವಶರಣ–ಶರಣೆಯರ ದೃಷ್ಟಿಯಲ್ಲಿ 'ಶರಣಧರ್ಮ'ವೆಂದರೆ ವಿಶ್ವಮಾನವ ಧರ್ಮವೇ ಆಗಿದೆ. ನುಡಿದಂತೆ ನಡೆದ ವಚನಕಾರರು ಜಾತಿಭೇದವನ್ನು ತೊಡೆದುಹಾಕಲು ನಡೆಸಿದ ಹೋರಾಟ ತುಂಬ ಮಹತ್ವಪೂರ್ಣವಾದುದು. ಜಾತಿವ್ಯವಸ್ಥೆಯು ಭದ್ರವಾಗಿ ತಳವೂರಿತ್ತು. ಉಚ್ಚ–ನೀಚ ಭಾವನೆಗಳು ಬೇರೂರಿಬಿಟ್ಟಿದ್ದವು. ಸಂಪ್ರದಾಯವಾದಿಗಳು ಜಾತಿ ವ್ಯವಸ್ಥೆಯನ್ನು ನೀರು ಗೊಬ್ಬರ ಹಾಕಿ ಪೋಷಿಸುತ್ತಲೇ ಇದ್ದರು. ಇದರಿಂದಾಗಿ ಮಾನವರ ನಡುವೆ ದೊಡ್ಡ ಕಂದಕವೇ ಏರ್ಪಟ್ಟಿತ್ತು. ಪರಸ್ಪರ ಪ್ರೀತಿವಿಶ್ವಾಸಗಳು ದೂರವಾಗಿದ್ದವು. ಮೇಲ್ಜಾತಿಯವರು ತಾವು ಸಮಾಜಶ್ರೇಷ್ಠರೆಂಬ ಸುಳ್ಳು ಭ್ರಮೆಯಲ್ಲಿ ತಮ್ಮ ಬೆಳವಣಿಗೆಯನ್ನು ತಾವೇ ನಾಶ ಮಾಡಿಕೊಂಡಿದ್ದರೆ, ಕೆಳವರ್ಗದವರು ತಾವು ನಿಮ್ನಜಾತಿಯವರೆಂಬ ಕೀಳರಿಮೆಯಿಂದ ನೆಲಕಚ್ಚಿಬಿಟ್ಟಿದ್ದರು. ಜಾತಿವ್ಯವಸ್ಥೆಯು ಕೆಳವರ್ಗದವರನ್ನು ಶೋಷಣೆ ಮಾಡುವ ಒಂದು ಪ್ರಬಲ ಅಸ್ತ್ರವಾಗಿತ್ತು.

ಆದ್ದರಿಂದ ಶೋಷಣೆಗೆ ಮೂಲ ಕಾರಣವಾಗಿದ್ದ ಜಾತಿವ್ಯವಸ್ಥೆಯನ್ನು ನಿರ್ಮೂಲನ ಮಾಡಲು ನಿಶ್ಚಯಿಸಿ ಬ್ರಾಹ್ಮಣ ಹುಡುಗಿಯನ್ನು ದಲಿತ ಗಂಡಿನೊಂದಿಗೆ ಬಸವಣ್ಣನವರು ಮದುವೆ ಮಾಡಿಸುತ್ತಾರೆ. ಮೇಲ್ವರ್ಗಕ್ಕೆ ಸೇರಿದ ಬ್ರಾಹ್ಮಣ ಹುಡುಗಿಯನ್ನು ಕೆಳವರ್ಗಕ್ಕೆ ಸೇರಿದ ದಲಿತ ಹುಡುಗನೊಂದಿಗೆ ಮದುವೆ ಮಾಡಿಸಿದರೆ ಮಿಕ್ಕ ಜಾತಿಗಳವರು ತಮ್ಮ ತಮ್ಮ ಜಾತಿಗಳನ್ನು ಸಹಜವಾಗಿಯೇ ನಿರಾಕರಿಸುತ್ತಾರೆಂಬ ಪ್ರಾಮಾಣಿಕ ಅನಿಸಿಕೆ ಬಸವಣ್ಣನವರದಾಗಿತ್ತೆಂದು ತೋರುತ್ತದೆ.

ಸ್ತ್ರೀಗೆ ಸಮಾನತೆಯನ್ನು ಒದಗಿಸಿಕೊಟ್ಟದ್ದು ವಚನಕಾರರ ಒಂದು ಪ್ರಮುಖ ಸಾಧನೆ ಎನ್ನಬೇಕು. ಸ್ತ್ರೀ ಕೇವಲ ಪುರುಷನ ಆಳಾಗಿ ಅಡುಗೆಮನೆಗೆ ಸೀಮಿತವಾಗಿ ಬೌದ್ಧಿಕ ವಿಕಸನವನ್ನು ಕಳೆದುಕೊಂಡುಬಿಟ್ಟಿದ್ದಳು. ಅವಳಿಗೆ ಸ್ವಂತ ವ್ಯಕ್ತಿತ್ವವೆಂಬುದು ಇರಲೇ ಇಲ್ಲ. ಆದರೆ ಬಸವಣ್ಣ ಮುಂತಾದ ವಚನಕಾರರು ಸ್ತ್ರೀಗೆ ಸಮಾನತೆಯನ್ನು ಒದಗಿಸಿಕೊಡುವುದರ ಮೂಲಕವಾಗಿ ಅವಳ ಬೌದ್ಧಿಕ ವಿಕಸನಕ್ಕೆ ದಾರಿಮಾಡಿಕೊಟ್ಟರು. ಆದ್ದರಿಂದ ಅಕ್ಕಮಹಾದೇವಿ, ಮುಕ್ತಾಯಕ್ಕ, ರೇಚವ್ವೆ, ಸಂಕವ್ವ, ಲಿಂಗಮ್ಮ, ಸತ್ಯಕ್ಕನಂಥ ಹಲವಾರು ಜನ ದಿಟ್ಟ ವಚನಕಾರ್ತಿಯರು ರೂಪಗೊಳ್ಳಲು ಸಾಧ್ಯವಾಯಿತು. ಸ್ತ್ರೀಯ ಬದುಕಿನಲ್ಲಿ ಭರವಸೆಯನ್ನು, ಧೈರ್ಯ–ಸಾಹಸಗಳನ್ನು ತುಂಬಿ ಅವರನ್ನು ತಮ್ಮ ಸಮಾಜೋ–ಧಾರ್ಮಿಕ ಚಳವಳಿಯಲ್ಲಿ ಭಾಗಿಗಳನ್ನಾಗಿ ಮಾಡಿ ಸಮಾಜ ಪರಿವರ್ತನೆಗೆ ಪ್ರಾಮಾಣಿಕ ಹೋರಾಟ ನಡೆಸಿದ್ದು ನಿಜಕ್ಕೂ ಸ್ತುತ್ಯಾರ್ಹವಾಗಿದೆ. ಸ್ತ್ರೀಯು ಭಾಗವಹಿಸದ ಚಳವಳಿ, ಆಂದೋಲನಗಳು ಗುರಿಮುಟ್ಟಲಾರವೆಂಬ ಸತ್ಯವನ್ನು ವಚನಕಾರರು ಅರಿತಿದ್ದರೆಂಬುದು ಗಮನಾರ್ಹವಾಗಿದೆ. 'ಕಾಯಕವೇ ಕೈಲಾಸ'! ಎಂಬ ಸೂತ್ರದ ಮೂಲಕ, ದುಡಿಮೆಗೆ ಒತ್ತುಕೊಟ್ಟು ಸಮಾಜದಲ್ಲಿನ ಜಡತ್ವವನ್ನು ನಿವಾರಿಸಲು ಪ್ರಯತ್ನಿಸಿದ್ದು, ಮಾಡುವ ಕೆಲಸ ಯಾವುದಿದ್ದರೂ ಅದು ಮೇಲು–ಕೀಳು ಭಾವನೆ ಹೊರತುಪಡಿಸಿ 'ಉದ್ಯೋಗ ಸಮಾನತೆ'ಯನ್ನು ಪ್ರತಿಪಾದಿಸಿದ್ದು ದೊಡ್ಡ ಸಂಗತಿಯಾಗಿದೆ.

ವಚನ ವಿಶ್ಲೇಷಣೆಯ ಮೂಲಕ ವಚನಕಾರರು ಸಾಧಿಸಬಯಸಿದ ಬಹುದೃಷ್ಟಿಯ ಸಾಮಾಜಿಕ, ಧಾರ್ಮಿಕ, ಆರ್ಥಿಕ–ಸಮಾನತೆಯ ತಾತ್ವಿಕ ಚಿಂತನೆಗಳನ್ನು ತಿಳಿಯಲು ಮುಂದೆ ವಚನಗಳನ್ನು ಪರಿಶೀಲಿಸಲಾಗಿದೆ.

***ಚೆನ್ನಯ್ಯನ ಮನೆಯ ದಾಸಿಯ ಮಗನು***
***ಕಕ್ಕಯ್ಯನ ಮನೆಯ ದಾಸಿಯ ಮಗಳು***
***ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು***
***ಇವರಿಬ್ಬರಿಗೆ ಹುಟ್ಟಿದ ಮಗ ನಾನು***
***ಕೂಡಲಸಂಗಮದೇವನ ಆತ್ಮಸಾಕ್ಷಿಯಾಗಿ.***

(ವಚನ ಸಂಖ್ಯೆ 346, ಪುಟ ಸಂಖ್ಯೆ 83, ಸಂ ವ ಸಂಪುಟ 01)

ಚೆನ್ನಯ್ಯನ ದಾಸಿಯ ಮಗನು ಮತ್ತು ಕಕ್ಕಯ್ಯನ ದಾಸಿಯ ಮಗಳು ಇವರಿಬ್ಬರ ಸಂಗದಿಂದ ಬಸವಣ್ಣನವರ ಜನನವಾಯಿತೆಂದು ಅರ್ಥ ಮಾಡಬಾರದು. ಮಾದಾರಚೆನ್ನಯ್ಯ ಮತ್ತು ಡೋಹರ ಕಕ್ಕಯ್ಯನವರು ಅತ್ಯಂತ ಕೆಳವರ್ಗಕ್ಕೆ ಸೇರಿದವರಾಗಿದ್ದರು. ಶೂದ್ರಾತಿ ಶೂದ್ರರ ಮಗ ತಾನೆಂದು ಬಸವಣ್ಣ ಹೇಳಿಕೊಳ್ಳುವಲ್ಲಿ, ತನ್ನನ್ನು ಬ್ರಾಹ್ಮಣ ಜಾತಿಯೊಂದಿಗೆ ಗುರುತಿಸಿಕೊಳ್ಳದೆ, ದಲಿತ ವರ್ಗದವರೊಂದಿಗೆ ಗುರುತಿಸಿಕೊಳ್ಳುತ್ತಾರೆಂಬುದು ಇಲ್ಲಿನ ಧ್ವನ್ಯರ್ಥ. ಪ್ರಮುಖವಾಗಿ ಗುರುತಿಸಬೇಕಾದ ಎರಡು ಮುಖ್ಯ ಸಂಗತಿಗಳೆಂದರೆ, ಬಸವಣ್ಣ ತಾನು ಚೆನ್ನಯ್ಯ, ಕಕ್ಕಯ್ಯರ ದಾಸ–ದಾಸಿಯರ ಮಕ್ಕಳಿಂದ ಜನಿಸಿದವನೆಂದು ಹೇಳಿಕೊಳ್ಳುವಲ್ಲಿ, ಬ್ರಾಹ್ಮಣ ಜಾತಿಯ ಶ್ರೇಷ್ಠತೆಯನ್ನು ತ್ಯಜಿಸುವುದರ ಮೂಲಕ ಜಾತಿನಿರಾಕರಣೆ ಮಾಡಿದ್ದು ಮತ್ತು ದಲಿತವರ್ಗದವರೊಂದಿಗೆ ಗುರುತಿಸಿಕೊಳ್ಳುವುದರ ಮೂಲಕ ದಲಿತರ ನೋವಿನ ಬದುಕಿಗೆ

ಪ್ರಾಮಾಣಿಕವಾಗಿ ಸ್ಪಂದಿಸಿ ಅಪಾರ ಮಾನವೀಯ ಕಾಳಜಿಯನ್ನು ತೋರಿಸಿದ್ದು ಬಸವಣ್ಣ ಸ್ವಜಾತಿ ನಿರಾಕರಣೆ ಮಾಡಿ ದಲಿತರ ನೋವಿಗೆ ಪ್ರಾಮಾಣಿಕವಾಗಿ ಸ್ಪಂದಿಸಿದ್ದು ಅವರು ನಂಬಿದ ಸಾಮಾಜಿಕ ಸಮಾನತೆಯ ಪ್ರತೀಕವಾಗಿದೆ.

***ಅಪ್ಪನು ನಮ್ಮ ಮಾದರಚೆನ್ನಯ್ಯ,***
***ಬೊಪ್ಪನು ನಮ್ಮ ಡೋಹರಕಕ್ಕಯ್ಯ,***
***ಚಿಕ್ಕಯ್ಯನೆಮ್ಮಯ್ಯ, ಕಾಣಯ್ಯ,***
***ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ,***
***ಎನ್ನನೇತಕ್ಕರಿಯಿರಿ, ಕೂಡಲಸಂಗಯ್ಯಾ?***

(ವಚನ ಸಂಖ್ಯೆ 349, ಪುಟ ಸಂಖ್ಯೆ 84, ಸಂ ವ ಸಂಪುಟ 01)

ಬಸವಣ್ಣನವರ ಈ ವಚನವು ಮೇಲಿನ ಆಶಯವನ್ನು ಅಭಿವ್ಯಕ್ತಪಡಿಸುತ್ತದೆ. ದಲಿತವರ್ಗಕ್ಕೆ ಸೇರಿದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ ಮುಂತಾದವರು ತನ್ನ ಅಪ್ಪ–ಅಣ್ಣ ಮುಂತಾದ ರಕ್ತಸಂಬಂಧಿಕರು ಎಂದು ಹೇಳಿಕೊಳ್ಳುವಲ್ಲಿ ಸಾಮಾಜಿಕ ಪರಿವರ್ತನೆಗೆ ಬಸವಣ್ಣ ಕೊಟ್ಟಿದ್ದ ಮಹತ್ವವನ್ನು ಎತ್ತಿಹಿಡಿಯುತ್ತದೆ. ಬಸವಣ್ಣನವರಿಗೆ ಉಚ್ಚ–ನೀಚ ಭಾವನೆಗಳನ್ನು ಸೃಷ್ಟಿಸಿ ಸಮಾಜವನ್ನು ಛಿದ್ರ–ಛಿದ್ರಗೊಳಿಸಿದ್ದ ಜಾತಿ ವ್ಯವಸ್ಥೆಯನ್ನು ನಿರ್ಮೂಲನ ಮಾಡುವುದು ಬಹುಮುಖ್ಯವಾಗಿತ್ತು. ಆದ್ದರಿಂದಲೇ ಸ್ವಜಾತಿ ನಿರಾಕರಣೆ ಮಾಡಿ ತನ್ನನ್ನು ಕೆಳವರ್ಗದವರೊಂದಿಗೆ ಗುರುತಿಸಿಕೊಳ್ಳುವುದರ ಮೂಲಕ ಸಾಮಾಜಿಕ ಸಮಾನತೆಗೆ ದಿಟ್ಟ ಹೋರಾಟ ನಡೆಸುತ್ತಾರೆ.

ಹಾವಿನಹಾಳ ಕಲ್ಲಯ್ಯನ ವಚನದಲ್ಲಿ ಸಾಮಾಜಿಕ ಸಮಾನತೆಯ ಪ್ರತಿಪಾದನೆ ಎದ್ದುಕಾಣುತ್ತದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮುಂತಾದ ಜಾತಿಯವರಿಗೂ ಒಂದೇ ರೀತಿಯ ಜನನ–ಮರಣ, ಅಭಿಲಾಷೆ, ಪ್ರವೃತ್ತಿಗಳು ಇರುವುದರಿಂದ ಒಬ್ಬ ಶ್ರೇಷ್ಠ, ಇನ್ನೊಬ್ಬ ಕನಿಷ್ಠವೆಂಬ ವರ್ಣಭೇದದಿಂದ ಪ್ರಯೋಜನವಿಲ್ಲ. ವರ್ಣಭೇದವನ್ನು ಬಿಟ್ಟು ಎಲ್ಲರೂ ಒಂದೇ ಎಂಬ ಸಮತಾಭಾವದಿಂದ ಬದುಕನ್ನು ಸಾಗಿಸುವುದು ಆರೋಗ್ಯಪೂರ್ಣ ನಿಲುವು ಎಂದು ಒತ್ತಿ ಹೇಳಲಾಗಿದೆ. ಅಲ್ಲದೆ ಮಾದಾರ ಚೆನ್ನಯ್ಯ, ಸಿದ್ಧರಾಮಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ–ಮುಂತಾದ ಪ್ರಮುಖ ವಚನಕಾರರೆಲ್ಲರೂ ಸಾಮಾಜಿಕ ಸಮಾನತೆಯನ್ನು ತಮ್ಮ ವಚನಗಳಲ್ಲಿ ತುಂಬ ಧ್ವನಿಪೂರ್ಣವಾಗಿ ಪ್ರತಿಪಾದಿಸಿರುವುದನ್ನು ನೋಡುತ್ತೇವೆ.

ಧಾರ್ಮಿಕ ಅಸಮಾನತೆಯು ವಚನಕಾರರ ಕಾಲದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇದ್ದು, ಚಲನಶೀಲತೆ ಮತ್ತು ಸ್ವಂತಿಕೆಯನ್ನು ಕಳೆದುಕೊಂಡು ಜನವಿರೋಧಿ ಕೆಲಸದಲ್ಲಿ ತೊಡಗಿತ್ತೆಂಬುದನ್ನು ವಚನಕಾರರು ತುಂಬ ಮಾರ್ಮಿಕವಾಗಿ ತಮ್ಮ ವಚನಗಳಲ್ಲಿ ಹಿಡಿದಿಟ್ಟಿದ್ದಾರೆ–

***ಆದಿಪುರಾಣ ಅಸುರರಿಗೆ ಮಾರಿ***
***ವೇದಪುರಾಣ ಹೋತಿಂಗೆ ಮಾರಿ***
***ರಾಮಪುರಾಣ ರಕ್ಕಸರಿಗೆ ಮಾರಿ***

***ಭಾರತಪುರಾಣ ಗೋತ್ರಕ್ಕೆ ಮಾರಿ***
***ಎಲ್ಲ ಪುರಾಣ ಕರ್ಮಕ್ಕೆ ಮೊದಲು***
***ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ ಕೂಡಲಸಂಗಮದೇವ.***

(ವಚನ ಸಂಖ್ಯೆ 571, ಪುಟ ಸಂಖ್ಯೆ 142, ಸ ವ ಸಂಪುಟ 01)

ಧಾರ್ಮಿಕ ಗ್ರಂಥಗಳಾದ ಪುರಾಣ, ವೇದ, ರಾಮಾಯಣ, ಮಹಾಭಾರತಗಳು ಜನವಿರೋಧಿ ತತ್ವಗಳನ್ನು ಒಳಗೊಂಡಿದ್ದನ್ನೂ ಆ ಮೂಲಕವಾಗಿ ಧರ್ಮ ಜನರನ್ನು ಉದ್ಧಾರ ಮಾಡುವುದರ ಬದಲು ಅವರನ್ನು ಬಲಿಪಶುವನ್ನಾಗಿ ಮಾಡಿ ಶೋಷಣೆ ಮಾಡಿದ್ದನ್ನು ಬಸವಣ್ಣನವರ ಈ ವಚನವು ಅತ್ಯಂತ ಮಾರ್ಮಿಕವಾಗಿ ಸೂಚಿಸುತ್ತದೆ. ಧರ್ಮವು ಮಾನವನನ್ನು ಅಧೋಗತಿಯಿಂದ ಮೇಲೆತ್ತಿ ಅವನನ್ನು ಉದ್ಧಾರ ಮಾಡಬೇಕು. ಆದರೆ ಧರ್ಮಗ್ರಂಥಗಳಾದ ವೇದ, ಉಪನಿಷತ್ತು, ಪುರಾಣ, ರಾಮಾಯಣ, ಮಹಾಭಾರತ–ಮುಂತಾದ ಧರ್ಮಗ್ರಂಥಗಳು ಕರ್ಮಕಾಂಡಕ್ಕೆ ಒತ್ತುಕೊಟ್ಟು, ಧರ್ಮದ ಹೆಸರಿನಲ್ಲಿ ಬಹುಸಂಖ್ಯಾತ ದ್ರಾವಿಡ ಶೂದ್ರರ ಬದುಕನ್ನು ಅಸಹನೀಯಗೊಳಿಸಿವೆ. ಗೊಡ್ಡು ಸಂಪ್ರದಾಯ ಜನವಿರೋಧಿಯಾದ ಮತ್ತು ಅಸಮಾನತೆಯಿಂದ ಕೂಡಿದ ಧರ್ಮದಿಂದ ಜನರ ಉದ್ಧಾರ ಖಂಡಿತ ಸಾಧ್ಯವಿಲ್ಲ ಎಂಬ ಸತ್ಯವನ್ನು ಬಲ್ಲವರಂತೆ ಬಸವಣ್ಣನವರು ಉದಾಹರಿಸಿದ್ದಾರೆ– 'ನಿಮ್ಮ ಪುರಾಣಕ್ಕೆ ಪ್ರತಿ ಇಲ್ಲ ಕೂಡಲಸಂಗಮದೇವ' ಎಂದು ನುಡಿದು ಶರಣಧರ್ಮವು ಸರ್ವರಿಗೂ ಧಾರ್ಮಿಕ ಸಮಾನತೆಯನ್ನು ನೀಡುವ ವಿಶ್ವಮಾನವಧರ್ಮ ಎಂದು ಸೂಚಿಸಿ, ಧಾರ್ಮಿಕ ಸಮಾನತೆಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಬಸವಣ್ಣ ಮುಂತಾದ ವಚನಕಾರರು ಧಾರ್ಮಿಕ ಸಮಾನತೆಯನ್ನು ತಮ್ಮ ಹೋರಾಟದ ಒಂದು ಪ್ರಮುಖ ಅಂಶವನ್ನಾಗಿಟ್ಟುಕೊಂಡು, ಸರ್ವರಿಗೂ ಧಾರ್ಮಿಕ ಸಮಾನತೆಯನ್ನು ದೊರಕಿಸಿಕೊಡುವ ನಿಟ್ಟಿನತ್ತ ಪ್ರಾಮಾಣಿಕ ಪ್ರಯತ್ನ ಮಾಡಿದ್ದು ಇಂದು ಇತಿಹಾಸದ ಮಾತಾಗಿದೆ.

ವೇದಂಗಳೆಲ್ಲ ಬ್ರಹ್ಮನೆಂಜಲು
***ಶಾಸ್ತ್ರಂಗಳೆಲ್ಲ ಸರಸ್ವತಿಯೆಂಜಲು***
***ಆಗಮಂಗಳೆಲ್ಲ ರುದ್ರನೆಂಜಲು***
***ಪುರಾಣಂಗಳೆಲ್ಲ ವಿಷ್ಣುವಿನೆಂಜಲು***
***ನಾದ–ಬಿಂದು–ಕಳೆಗಳೆಂಬವು ಅಕ್ಷರತ್ರಯದೆಂಜಲು***
***ಅಕ್ಷರತ್ರಯಂಗಳು ಪ್ರಕೃತಿಯೆಂಜಲು***
***ಇಂತಿವೆಲ್ಲವ ಹೇಳುವರು ಕೇಳುವರು***
***ಪುಣ್ಯಪಾಪಂಗಳೆಂಜಲೆಂದಾತನಂಬಿಗರ ಚೌಡಯ್ಯ.***

(ವಚನ ಸಂಖ್ಯೆ 240, ಸಂ ವ ಸಂ 01, ಪು ಸಂಖ್ಯೆ 81)

ವೇದ, ಶಾಸ್ತ್ರ, ಆಗಮ, ಪುರಾಣಗಳೆಲ್ಲ ಬ್ರಹ್ಮ, ಸರಸ್ವತಿ, ರುದ್ರ, ವಿಷ್ಣು ದೇವತೆಗಳ 'ಎಂಜಲು' ಎಂದು ಅಂಬಿಗರ ಚೌಡಯ್ಯ ಹೇಳುವಲ್ಲಿ, ಧಾರ್ಮಿಕ ಗ್ರಂಥಗಳು ತಮ್ಮ ಸ್ವಂತಿಕೆ, ಸ್ವೋಪಜ್ಞತೆಗಳನ್ನು ಕಳೆದುಕೊಂಡದ್ದು ಸ್ಪಷ್ಟವಾಗಿದೆ. ಚಲನಶೀಲತೆಯನ್ನು ಸ್ವೋಪಜ್ಞತೆಯನ್ನು ಕಳೆದುಕೊಂಡ ಮೃತ

ಧರ್ಮಗ್ರಂಥಗಳ ವಿಧಿ–ವಿಧಾನಗಳಂತೆ ಧರ್ಮವನ್ನು ಮುನ್ನಡೆಸಿದರೆ ಅಂಥ ಕುರುಡು ಧರ್ಮದಿಂದ ಜನತೆಗೆ ಲಾಭಕ್ಕಿಂತ ಹಾನಿಯೇ ಜಾಸ್ತಿ. ವಚನಕಾರರ ಕಾಲದಲ್ಲಿ ವೈದಿಕತೆಯು ಜನವಿರೋಧಿಯಾಗಿತ್ತು; ಆ ಮೂಲಕ ವೈದಿಕತೆಯು ಧಾರ್ಮಿಕ ಅಸಮಾನತೆಯನ್ನು ಹುಟ್ಟುಹಾಕಿತ್ತು. ಆದ್ದರಿಂದಲೇ ಚೌಡಯ್ಯ ಅಸಮಾನತೆಯನ್ನು ಖಾರವಾಗಿ ಛೇಡಿಸಿರುವುದು. (ಸಂ.ವ.ಸಂ.3, ವ.ಸಂ.733).[6] ಮಡಿವಾಳ ಮಾಚಯ್ಯನ ಈ ವಚನದಲ್ಲೂ ವೇದ, ಶಾಸ್ತ್ರ, ಪುರಾಣ, ಆಗಮ–ಮುಂತಾದ ಧರ್ಮಗ್ರಂಥಗಳ ಅರ್ಥಹೀನತೆ, ಬೂಟಾಟಿಕೆ, ಡಾಂಭಿಕತನ, ಆ ಮೂಲಕವಾಗಿ ತಲೆದೋರುವ ಧಾರ್ಮಿಕ ಅಸಮಾನತೆಯ ಚಿತ್ರಣ ತುಂಬ ಸಮರ್ಥವಾಗಿ ಮೂಡಿಬಂದಿದೆ.

ಕಾರ್ಲ್‌ಮಾರ್ಕ್ಸ್ ಹುಟ್ಟುವುದಕ್ಕಿಂತ ಮೊದಲೇ ವಚನಕಾರರು ಆರ್ಥಿಕ ಸಮಾನತೆಯನ್ನು ತಮ್ಮ ಅರಿವಿಗೆ ತಕ್ಕನಾದ ರೀತಿಯಲ್ಲಿ ಪ್ರತಿಪಾದಿಸಿದ್ದು, ನಿಜಕ್ಕೂ ಮಹತ್ವದ ಸಂಗತಿ. ವಚನಕಾರರ ಕಾಲದಲ್ಲಿ 'ಅಸಂಗ್ರಹ' ಒಂದು ನೀತಿಯಾಗಿತ್ತು. ಯಾರೂ ಅಗತ್ಯಕ್ಕಿಂತ ಹೆಚ್ಚಿನ ಸಂಪತ್ತನ್ನು ಇಟ್ಟುಕೊಳ್ಳುವಂತಿರಲಿಲ್ಲ. ನಿತ್ಯಜೀವನಕ್ಕೆ ಬೇಕಾಗುವಷ್ಟು ಸಂಪತ್ತನ್ನು ಮಾತ್ರ ಇಟ್ಟುಕೊಳ್ಳಬೇಕಾಗಿತ್ತು. ನಿತ್ಯೋಪಜೀವನಕ್ಕೆ ಬೇಕಾದ ಹಣವನ್ನು ದುಡಿಮೆಯ ಮೂಲಕವೇ ಸಂಗ್ರಹಿಸಬೇಕಾಗಿತ್ತೇ ಹೊರತು ಅನ್ಯ ವಾಮಮಾರ್ಗಗಳಿಂದಲ್ಲ. ಅಕ್ರಮವಾದ ರೀತಿಯಲ್ಲಿ ಹಣ ಸಂಗ್ರಹಿಸುವುದು ವಚನಕಾರರ ನೈತಿಕ ಬದುಕಿಗೆ ವಿರುದ್ಧವಾಗಿತ್ತು. ಆ ಕಾರಣದಿಂದ ವಚನಕಾರರು ಕಾಯಕಕ್ಕೆ ಹೆಚ್ಚಿನ ಮಹತ್ವ ಕೊಟ್ಟರು. ಗುರುವಾಗಲಿ, ಜಂಗಮನಾಗಲಿ ಪ್ರತಿಯೊಬ್ಬರೂ ಕಾಯಕದಿಂದಲೇ ಜೀವನ ನಡೆಸಬೇಕೆಂಬುದು ಅಂದಿನ ಬದುಕಿನ ನೀತಿಯಾಗಿತ್ತು. 'ಕಾಯಕವೇ ಕೈಲಾಸ' ಎಂಬ ಉಕ್ತಿಯ ಸಾರವನ್ನು ಬಸವಣ್ಣ ಆದಿಯಾಗಿ ಎಲ್ಲ ವಚನಕಾರರು ತಪ್ಪದೆ ನಿಷ್ಠೆಯಿಂದ ಪರಿಪಾಲಿಸುತ್ತಿದ್ದರು. ವಚನಕಾರರು ಕಾಯಕಕ್ಕೆ ಕೊಟ್ಟ ಪ್ರಾಮುಖ್ಯತೆಯಿಂದಾಗಿ ಸಮಾಜದಲ್ಲಿ ಆರ್ಥಿಕ ಸಮಾನತೆ ಬರಲು ಸಾಧ್ಯವಾಯಿತು. 'ಅಸಂಗ್ರಹ' ನೀತಿ ಆರ್ಥಿಕ ಸಮಾನತೆಯ ನೆಲೆಗಟ್ಟು. ಹಾಗೂ ದುಡಿದೇ ಸಂಪಾದಿಸಬೇಕೆಂಬ ನಿಯಮವು ಆರ್ಥಿಕ ಸಮಾನತೆಗೆ ಪೋಷಕ.

***ಕಾಯಕದಲ್ಲಿ ನಿರತನಾದಡೆ ಗುರುದರುಶನವಾದಡೂ ಮರೆಯಬೇಕು,***
***ಲಿಂಗಪೂಜೆಯಾದಡೂ ಮರೆಯಬೇಕು,***
***ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು***
***ಕಾಯಕವೆ ಕೈಲಾಸವಾದ ಕಾರಣ***
***ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.***

(ವಚನ ಸಂಖ್ಯೆ 1170, ಸಂಕೀರ್ಣ ವ ಸಂ 01, ಪು,ಸಂಖ್ಯೆ 369)

ಆಯ್ದಕ್ಕಿ ಮಾರಯ್ಯನ ಈ ವಚನದಲ್ಲಿ ಗುರು, ಲಿಂಗ, ಜಂಗಮ ಮತ್ತು ಇಷ್ಟದೇವತೆಗಳಿಗಿಂತ ಕಾಯಕ ಮುಖ್ಯ ಎಂದು ಹೇಳುವಲ್ಲಿ ಕಾಯಕ ಮಹತ್ವ ತಿಳಿದುಬರುತ್ತದೆ. ಆಯ್ದಕ್ಕಿ ಮಾರಯ್ಯ ತನ್ನ ವಚನದಲ್ಲಿ 'ಕಾಯಕವಳಿದ ಠಾವಿನಲ್ಲಿ ಜೀವನ ಸುಳಿವುಂಟೆ?' ಎಂದು ನುಡಿದಿರುವುದು ಮಹತ್ವದ ಸಂಗತಿಯಾಗಿದೆ. ಎಲ್ಲಿ ಕಾಯಕವಿಲ್ಲವೋ ಅಲ್ಲಿ ಜೀವನವೇ ಇಲ್ಲವೆಂದು ಹೇಳುವ ಈ ಮಾತು ತುಂಬ ಅರ್ಥಪೂರ್ಣ.ಪರಿಶ್ರಮಸಹಿತ ಬಾಳು ಅರ್ಥಪೂರ್ಣತೆಯನ್ನು, ಸಾರ್ಥಕತೆಯನ್ನು ಪಡೆಯುತ್ತದೆ.

ಪರಿಶ್ರಮವಿಲ್ಲದ ಬದುಕು ಬದುಕೇ ಅಲ್ಲ; ನಿರರ್ಥಕ ಬದುಕು. ಶ್ರಮರಹಿತ ವ್ಯಕ್ತಿಯು ಬದುಕಿದ್ದರೂ ಸತ್ತಂತೆಯೇ. ಆ ಬದುಕಿಗೆ ಸಾರ್ಥಕತೆಯಿಲ್ಲ. ಕಾಯಕ ಮೂಲಕ ಜಡತ್ವ ನೀಗಿ, ಕ್ರಿಯಾಶೀಲತೆ ಅಧಿಕಗೊಂಡು, ಸೃಜನಶೀಲತೆ ಅರಳಿ ವ್ಯಕ್ತಿಯ ಬದುಕು ಹಸನಗೊಳ್ಳುತ್ತದೆ. ಕಾಯಕಕ್ಕೆ ಒತ್ತುಕೊಡುವ ಆಯ್ದಕ್ಕಿ ಮಾರಯ್ಯನ ನುಡಿಯ ಮಹತ್ವ ಪಡೆಯುತ್ತದೆ. ಮಾರಯ್ಯನ ನಿಲುವು ಆರ್ಥಿಕ ಸಮಾನತೆಯನ್ನು ಎತ್ತಿಹಿಡಿಯುತ್ತದೆ.

***ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ***
***ಚಿತ್ತ ವಿಚ್ಛಂದವಾಗದಿರಬೇಕು.***
***ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿಲ್ಲದಿರಬೇಕು.***
***ನೇಮದ ಕೂಲಿಯ ಬಿಟ್ಟು***
***ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದಡೆ***
***ತಾ ಮಾಡುವ ಸೇವೆ ನಷ್ಟವಯ್ಯಾ.***
***ನಿನ್ನಾಸೆಯ ವೇಷದ ಪಾಶಕ್ಕೆ ನೀನೆ ಹೋಗು.***
***ನನಗೆ ನಮ್ಮ ಜಂಗಮದ ಪ್ರಸಾದದಾಗೆ***
***ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯಾ.***

(ವಚನ ಸಂಖ್ಯೆ 1326, ಪುಟ ಸಂಖ್ಯೆ 418, ಸಮಗ್ರ ವ ಸಂ 01)

ನುಲಿಯ ಚಂದಯ್ಯನ ವಚನ ಕಾಯಕ ಮಹತ್ವ, ಪಾವಿತ್ರತೆ ಮತ್ತು ಆರ್ಥಿಕ ಸಮಾನತೆಯನ್ನು ಮಾರ್ಮಿಕವಾಗಿ ಧ್ವನಿಸುತ್ತದೆ. ಇಲ್ಲಿ ಮುಖ್ಯವಾಗಿ ಮೂರು ಅಂಶಗಳನ್ನು ಗಮನಿಸಬಹುದಾಗಿದೆ. ಒಂದು : ಮಾಡುವ ಕಾರ್ಯ ಪರಿಶುದ್ಧವಾಗಿರಬೇಕು; ಮತ್ತು ಆ ಕಾಯಕವನ್ನು ಶುದ್ಧಿಯಿಂದ, ನಿಷ್ಠೆಯಿಂದ ಮಾಡಬೇಕು. ಎರಡು : ದುಡಿಮೆಗೆ ತಕ್ಕನಾದ ಕೂಲಿಯನ್ನು ಸ್ವೀಕರಿಸಬೇಕು. ಮೂರು: ದುಡಿಮೆಗೆ ಮೀರಿದ ಹಣ ಸಂಗ್ರಹಣೆ ಮಾಡಕೂಡದು ಮತ್ತು ಅದು ಅಪರಾಧ. ಮಾನವ ಬದುಕಿಗೆ ಹಣ ಬೇಕು; ಆ ಹಣವನ್ನು ಆತ ಕಾಯಕ ಮೂಲಕವೇ ಸಂಪಾದಿಸಬೇಕು; ದುಡಿಮೆಗೆ ತಕ್ಕ ಪ್ರತಿಫಲವನ್ನು ಮಾತ್ರ ಪಡೆಯಬೇಕು; ಆಸೆಪಟ್ಟು ಹೆಚ್ಚಿನ ಹಣಸಂಗ್ರಹಣೆ ಮಾಡುವುದು ಅಪರಾಧ. ವಚನಕಾರರು ಕಾಯಕಕ್ಕೆ ಕೊಟ್ಟ ಮಹತ್ವವನ್ನು, ಆ ಮೂಲಕವಾಗಿ ಅವರು ಸಾಧಿಸ ಹೊರಟ ಆರ್ಥಿಕ ಸಮಾನತೆಯನ್ನು ಔಚಿತ್ಯಪೂರ್ಣವಾಗಿ ಹೇಳುತ್ತದೆ. ನುಲಿಯ ಚಂದಯ್ಯ ತನ್ನ ಮತ್ತೊಂದು ವಚನದಲ್ಲಿ ಗುರು, ಲಿಂಗ, ಜಂಗಮವಾದರು ಕಾಯಕದಿಂದಲೇ ಜೀವನ್ಮುಕ್ತಿ ಎಂದು ಪ್ರತಿಪಾದಿಸಿ ಕಾಯಕ ಮಹತ್ವವನ್ನು ಎತ್ತಿಹಿಡಿಯುತ್ತಾನೆ. ಬಾಚಿಕಾಯಕದ ಬಸವಯ್ಯನ ಪತ್ನಿ ಕಾಳವ್ವೆ ತನ್ನ ಒಂದು ವಚನದಲ್ಲಿ 'ಕಾಯಕ ತಪ್ಪಿದಡೆ ಸೈರಿಸಬಾರದು' ಎಂದು ನುಡಿದು ಕಾಯಕ ಮಹತ್ವಕ್ಕೆ ಒತ್ತು ಕೊಟ್ಟಿದ್ದಾಳೆ.

ವಚನಕಾರರು ವೈದಿಕ ಪುರುಷ ಪ್ರಧಾನ ತ್ತವಾಚರಣೆಗಳನ್ನು ತಿರಸ್ಕರಿಸಿ ಸ್ತ್ರೀಗೆ ಸ್ವಾತಂತ್ರ್ಯವನ್ನು ಕೊಡುವುದರ ಮೂಲಕ ಸಾಮಾಜಿಕ ಸಮಾನತೆಯನ್ನು ಒದಗಿಸಲು ಹೋರಾಟ ಮಾಡಿದರು. ಆಗಲೂ ಸ್ತ್ರೀಯು ಪುರುಷನ ಕಾಮನೆಗಳನ್ನು ಈಡೇರಿಸುವ ಭೋಗದವಸ್ತು ಆಗಿದ್ದಳು; ಗಂಡನ ದಾಸಿಯಾಗಿದ್ದು

ಅವನ ಸುಖದ ಬದುಕಿಗೆ ಪೋಷಕ ಸಾಮಗ್ರಿಯಾಗಿದ್ದಳು. ವಚನಕಾರರ ಕಾಲದಲ್ಲಿ ಸ್ತ್ರೀಗೆ ಸ್ವಾತಂತ್ರ್ಯ–ಸಮಾನತೆ ದೊರಕಿದ್ದರ ಫಲವಾಗಿ ದಿಟ್ಟ ವ್ಯಕ್ತಿತ್ವದ ಸ್ತ್ರೀಯರು ರೂಪಗೊಳ್ಳಲು ಅಲ್ಲಿಂದಲೆ ಬಿದ್ದ ಬೀಜ ಮೊಳೆತು ಬೆಳೆಯಲು ಸಾಧ್ಯವಾಯಿತು. ಅಕ್ಕಮಹಾದೇವಿಯ ವ್ಯಕ್ತಿತ್ವವು ಅಪರೂಪದ ವ್ಯಕ್ತಿತ್ವ. ಸ್ತ್ರೀ ಸ್ವಾತಂತ್ರ್ಯಕ್ಕೆ ಇವಳೊಂದು ಉಜ್ವಲ ಉದಾಹರಣೆ. ಇವಳ ಧೈರ್ಯ, ಸಾಹಸ, ಗಟ್ಟಿತನ, ದೃಢತೆ, ಹೋರಾಟಮಯ ಪ್ರವೃತ್ತಿ, ಛಲ, ಸ್ವತಂತ್ರಪ್ರಿಯತೆ, ಸ್ವಾಂತಿಕೆಗಳು ಇಂದಿನ ಮಹಿಳೆಯರಿಗೂ ಮಾರ್ಗದರ್ಶಕವಾಗಿವೆ.

***ಬೆಟ್ಟದ ಮೇಲೊಂದು ಮನೆಯ ಮಾಡಿ***
***ಮೃಗಂಗಳಿಗಂಜಿದಡೆಂತಯ್ಯ?***
***ಸಮುದ್ರದ ತಡಿಯಲೊಂದು ಮನೆಯ ಮಾಡಿ***
***ನೊರೆತೆರೆಗಳಿಗಂಜಿದಡೆಂತಯ್ಯ?***
***ಸಂತೆಯೊಳಗೊಂದು ಮನೆಯ ಮಾಡಿ***
***ಶಬ್ದಕ್ಕೆ ನಾಚಿದಡೆಂತಯ್ಯ?***
***ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ***
***ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ–ನಿಂದೆಗಳು ಬಂದರೆ***
***ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.***

(ವಚನ ಸಂಖ್ಯೆ 307, ಸಂ ವ ಸಂ 05, ಪು ಸಂಖ್ಯೆ 91)

ಮಾನವ ಹೋರಾಟಕ್ಕೆ ನಿಂತಾಗ ಹಲವಾರು ಅಡಚಣೆಗಳು ಎದುರಾಗುತ್ತವೆ. ಅಂತಹ ಅಡ್ಡಿ–ಆತಂಕಗಳನ್ನು ಧೈರ್ಯವಾಗಿ ಎದುರಿಸಿ ಗುರಿಮುಟ್ಟಬೇಕೆಂಬ ಛಲ, ಗಟ್ಟಿತನ, ಹೋರಾಟಮಯ ಪ್ರವೃತ್ತಿಗಳು ಅಕ್ಕನ ವಚನದಲ್ಲಿ ವ್ಯಕ್ತವಾಗಿವೆ. ಕೌಶಿಕ ರಾಜನ ಅಷ್ಟೈಶ್ವರ್ಯಗಳನ್ನು ತ್ಯಜಿಸಿದ ಅಕ್ಕ ಒಂಟಿಯಾಗಿ ಅಧ್ಯಾತ್ಮ ಸಾಧನೆಯತ್ತ ಮುಖ ಮಾಡಿ ಹೊರಟಾಗ, ಅವಳ ಈ ಸ್ಥಿತಿಯನ್ನು ಕಂಡು ಆಗದವರು, ಅರಿಯದ ಅಜ್ಞಾನಿಗಳು ಅವಳನ್ನು ನಿಂದಿಸಿ ಅವಮಾನ ಮಾಡಲು ಪ್ರಯತ್ನಿಸಿದ್ದರೂ ಆಶ್ಚರ್ಯವಿಲ್ಲ. ಸ್ತುತಿ–ನಿಂದೆಗಳನ್ನು ಸಮಾನಾಗಿ ಸ್ವೀಕರಿಸುತ್ತ ಸಮಾಧಾನದಿಂದ ಇರಬೇಕೆಂದು ಹೇಳುತ್ತಾಳೆ. ಸಾಧನೆಯ ಹಾದಿಯಲ್ಲಿ ತೆಗಳಿಕೆಯಂತೆ ಹೊಗಳುವಿಕೆಯೂ ತುಂಬ ಅಪಾಯವೆಂಬ ಅರಿವನ್ನು ಅಕ್ಕ ಹೊಂದಿರುವುದು ಸ್ಪಷ್ಟವಾಗಿದೆ. ಜನನ–ಮರಣವಿಲ್ಲದ, ಭವ–ಭಯವಿಲ್ಲದ ಚೆನ್ನಮಲ್ಲಿಕಾರ್ಜುನನನ್ನು ಒಲಿದ ಅಕ್ಕ 'ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ' ಎಂದು ಲೋಕದ ಗಂಡರನ್ನು ಛೇಡಿಸಿರುವುದು ಅವಳ ದಿಟ್ಟ ವ್ಯಕ್ತಿತ್ವವನ್ನು ಎತ್ತಿಹಿಡಿಯುತ್ತದೆ; ಮಾತ್ರವಲ್ಲದೆ ಗಂಡಿನ ದಬ್ಬಾಳಿಕೆಯನ್ನು ಸ್ತ್ರೀಯು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ಧ್ವನಿತವಾಗಿದೆ. ಅಕ್ಕನಲ್ಲದೆ, ಹಲವಾರು ವಚನಕಾರ್ತಿಯರು ಪುರುಷನ ವ್ಯಕ್ತಿತ್ವಕ್ಕೆ ಸಮಾನವಾದ ರೀತಿಯಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡದ್ದನ್ನು ವಚನ ಸಾಹಿತ್ಯದ ಮೂಲಕ ತಿಳಿಯುತ್ತೇವೆ. ಅಕ್ಕಮಹಾದೇವಿಯು, ಆ ಸಂದರ್ಭದ ಇತರೆ ವಚನಕಾರ್ತಿಯರ ಧೈರ್ಯ, ಸಾಹಸ, ಸ್ವಾಂತಿಕೆಗಳ ಪ್ರತಿನಿಧಿ ಎಂದು ಭಾವಿಸಬಹುದು.ಬಸವಣ್ಣನವರ ನೇತೃತ್ವದಲ್ಲಿ ನಡೆದ ಈ ಸಮಾಜೋ–ಧಾರ್ಮಿಕ ಚಳವಳಿಯಲ್ಲಿ ಪುರುಷರಂತೆ ಸ್ತ್ರೀಯರೂ ಭಾಗವಹಿಸಿದ್ದು ಮಹತ್ವದ ಸಂಗತಿ. ಸ್ತ್ರೀಯರು ಈ

ಚಳವಳಿಯಲ್ಲಿ ಭಾಗವಹಿಸುವುದರ ಮೂಲಕವಾಗಿ ಸ್ವಂತಿಕೆ, ಧೈರ್ಯ, ಸಾಹಸ, ಗಟ್ಟಿತನಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಸ್ತ್ರೀಯರಿಗೆ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ಮಾಡಿಕೊಟ್ಟ ಶಿವಶರಣರು, ಸ್ತ್ರೀ ಸಮಾನತೆಗೆ ಹೆಚ್ಚು ಬೆಲೆ ಕೊಟ್ಟಿದ್ದರೆಂಬುದರಲ್ಲಿ ಸಂದೇಹವಿಲ್ಲ. ಜನಸಾಮಾನ್ಯರ ಆಡುನುಡಿಯನ್ನು ವಚನಕಾರರು ತಮ್ಮ ವಚನಗಳ ರಚನೆಗೆ ಬಳಸಿದ್ದು, ವಚನಕಾರರ ಸಮಾನತಾ ಪ್ರಜ್ಞೆಯನ್ನು ಎತ್ತಿಹಿಡಿಯುತ್ತದೆ. ಒಟ್ಟಿನಲ್ಲಿ ವಚನಸಾಹಿತ್ಯದ ಮೂಲ ಉದ್ದೇಶವು ಸಮಾಜದಲ್ಲಿ ಸಮಾನತೆಯನ್ನು ತಂದು ಸರ್ವೋದಯವನ್ನು ಸಾಧಿಸುವುದೇ ಆಗಿತ್ತೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

**ಪರಾಮರ್ಶನ ಗ್ರಂಥಗಳು**


- ಬಸವರಾಜು ಎಲ್. (1995). *ಬಸವಣ್ಣನವರ ವಚನಗಳು.* ಸಹಚಿಂತನ ಸಹಿತ ಶರಣ ಬಸವೇಶ್ವರ ಗ್ರಂಥ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- ಚಿದಾನಂದಮೂರ್ತಿ ಎಂ. (1975). *ವಚನ ಸಾಹಿತ್ಯ.* ಬೆಂಗಳೂರು.
- ಕಲಬುರ್ಗಿ ಎಂ.ಎಂ. (ಸಂ.). (2012). ವಚನ. ಬಸವ ಸಮಿತಿ, ಬೆಂಗಳೂರು.
- ಕಲಬುರ್ಗಿ ಎಂ.ಎಂ. (ಸಂ.) (2001). ಬಸವಣ್ಣನವರ ವಚನ ಸಂಪುಟ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಕಲಬುರ್ಗಿ ಎಂ.ಎಂ. (ಸಂ.) (2001). ಸಂಕೀರ್ಣ ವಚನ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ನಾರಾಯಣ ಪಿ.ವಿ. (2016). *ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ.* ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ.
- ತಿಪ್ಪೇರುದ್ರಸ್ವಾಮಿ ಹೆಚ್. (1963). *ಶೂನ್ಯ ಸಂಪಾದನೆ ಒಂದು ವಿವರಣಾತ್ಮಕ ಪರಿಚಯ.* ಮೈಸೂರು.
- ವೀರಣ್ಣ. ಸಿ. (1986). ಹನ್ನೆರಡನೆಯ ಶತಮಾನದ ಕಾಯಕ ಜೀವಿಗಳ ಚಳವಳಿ. ಬೆಂಗಳೂರು.
- ವೀರಭದ್ರಯ್ಯ ಎಸ್.ಎಂ. (ಸಂ.) (1989). *ಚಿನ್ಮೂಲಾದ್ರಿ ಚೇತನ.* ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ.
- ವೀರಭದ್ರಯ್ಯ ಎಸ್.ಎಂ. (ಸಂ.) (1989). ಚಿನ್ಮೂಲಾದ್ರಿ ಚೇತನ. ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ.